



## ಹಬ್ಬದಲ್ಲಿ ಕಂಡ ಕಟ್ಟಿಗೆ ಮುಖಗಳು

ನಾಡಿನ ಕರಾವಳಿ ಭಾಗದಲ್ಲಿ ವಾರ್ಷಿಕವಾಗಿ ನಡೆಯುವ ಹಬ್ಬಗಳಲ್ಲಿ 'ಬಂಡಿ ಹಬ್ಬ' ಕೂಡ ಒಂದು. ಇದು ಈ ಭಾಗದ ಕೆಲವು ಹಳ್ಳಿಗಳಲ್ಲಿ ನಡೆಯುವ ಒಂದು ಸಾಂಪ್ರದಾಯಿಕ ಹಬ್ಬದಾಚರಣೆ. ಕೃಷಿ ಕಾರ್ಯಗಳಲ್ಲಿ ತೊಡಗುವ ರೈತಾಪಿ ಜನರು ಗ್ರಾಮದ ಪರಿವಾರ ದೇವರಿಗೆ ವಾರ್ಷಿಕವಾಗಿ ಪೂಜೆ, ಆಚರಣೆಗಳನ್ನು ಅರ್ಪಿಸುವುದು ಮೊದಲಿನಿಂದಲೂ ರೂಢಿಯಲ್ಲಿದೆ.

'ಬಂಡಿಹಬ್ಬ'ಕ್ಕೆ 1500ಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ. ಗ್ರಾಮ ಹಬ್ಬ ಎಂದಾಗ ಸಾಮಾನ್ಯವಾಗಿ ಗ್ರಾಮ ದೇವತೆಯ ಮೆರವಣಿಗೆ, ಕುಂಭಕಲಶದ ಮೆರವಣಿಗೆಗಳು ಭಕ್ತರ ಜೊತೆಗೆ ನಡೆಯುವುದು ವಾಡಿಕೆ. ಮೊದಲೆಲ್ಲಾ ಗ್ರಾಮದ ಪರಿವಾರ ದೇವರ ಮುಖಗಳನ್ನು ಕುಂಬಾರಿಕೆ ಮಾಡುವವರು ಮಣ್ಣಿನಲ್ಲಿ ತಯಾರಿಸಿ, ಅದನ್ನು ಬೆಂಕಿಯಲ್ಲಿ ಸುಟ್ಟು ಗಟ್ಟಿಗೊಳಿಸುವ ಪದ್ಧತಿ ಇತ್ತು. ಆ ನಂತರದ ದಿನಗಳಲ್ಲಿ ಮಣ್ಣಿನ ಮುಖಗಳ ಬದಲು ಹಗುರವಾದ ಕಟ್ಟಿಗೆಯಿಂದ ತಯಾರಿಸಿದ ದೇವರ ಮುಖಗಳನ್ನು ಮಾಡಿ, ಅದನ್ನು ಬಣ್ಣದಿಂದ ಅಲಂಕರಿಸಿ ದೇವರ ಉತ್ಸವ, ಬಂಡಿಹಬ್ಬದ ಮೆರವಣಿಗೆಯಲ್ಲಿ ಬಳಸಲಾಗುತ್ತಿದೆ. ನಮ್ಮ ನೆಲದ ಸಾಂಪ್ರದಾಯಿಕ ಸೊಗಡು, ಸಾಂಸ್ಕೃತಿಕ ಸೊಬಗಿನ ಒಂದು ಭಾಗವಾಗಿ ಗ್ರಾಮ ದೇವರು, ದೇವತೆಗಳ ಮುಖಗಳನ್ನು ಗ್ರಾಮದ ಹಬ್ಬದಲ್ಲಿ ಇಂದಿಗೂ ಕಾಣಬಹುದು.

**–ಅರ್ಚನಾ ಬೊಮ್ನಳ್ಳಿ, ಶಿರಸಿ**

## ತಲೆ ಒಂದು, ಶರೀರ ಐದು

ಗುಜರಾತಿನ ರಾಜಧಾನಿ ಅಹಮದಾಬಾದಿನಿಂದ ಸುಮಾರು 100 ಕಿ.ಮೀ. ದೂರದ ಮೊಢೇರಾದಲ್ಲಿ ಸೂರ್ಯ ದೇವಸ್ಥಾನವಿದೆ. ಇದು ಪ್ರವಾಸಿಗರ ನೆಚ್ಚಿನ ತಾಣ. ಪುಷ್ಪಾವತಿ ನದಿಯ ದಂಡೆಯ ಮೇಲೆ ಕ್ರಿ.ಶ.1026ರಲ್ಲಿ ಇಲ್ಲಿನ ರಾಜ ಭೀಮದೇವ ಸೋಲಂಕಿ ಈ ದೇಗುಲ ನಿರ್ಮಿಸಿದನಂತೆ. ಮಹಮ್ಮದ್ ಘಜನಿಯ ಪುನರಪಿ ದಾಳಿಯಿಂದ ದೇಗುಲ ಅಲ್ಲಲ್ಲಿ ಮುಕ್ಕಾಗಿ ಒಳಗೆ ಯಾವುದೇ ದೇವರ ವಿಗ್ರಹವಿಲ್ಲದಂತಾಗಿದೆ. ಹೀಗಾಗಿಯೇ ಇಲ್ಲಿ ಪೂಜೆ ನಡೆಯುತ್ತಿಲ್ಲ. ದೇಗುಲದ ಆವರಣದಲ್ಲಿ ಗುಡಾ ಮಂಟಪ, ಸಭಾಂಗಣ ಹಾಗೂ ಸಭಾ ಮಂಟಪವೆಂಬ ಮೂರು ವಿಭಾಗಗಳಿವೆ. ಸಭಾ ಮಂಟಪ 52 ಕಂಬಗಳಿಂದ ಆವೃತ್ತವಾಗಿದ್ದು, ಪ್ರತಿ ಕಂಬ ವರ್ಷದ 52 ವಾರಗಳ ಸೂಚಕವಾಗಿದೆ. ಅಲ್ಲಿನ ಒಂದು ಕಂಬದಲ್ಲಿನ ಕೆತ್ತನೆಯ ಚಿತ್ರವೇ ನೀವು ನೋಡುತ್ತಿರುವುದು. ಚಿತ್ರವು ಶಿಲ್ಪಿಯ ನೈಪುಣ್ಯತೆಯನ್ನು ಎತ್ತಿ ತೋರುತ್ತದೆ. ಇಲ್ಲಿ ದೇಹಗಳು 5 ಕಂಡರೂ ಎಲ್ಲ ದೇಹಗಳಿಗೆ ಹೊಂದುವಂತೆ ಒಂದೇ ಮುಂಡವನ್ನು ಕೆತ್ತಿರುವುದು ವಿಶೇಷ.

**–ಕೆ. ಆದಿತ್ಯ ಹೆಬ್ಬಾರ್, ಹರಪನಹಳ್ಳಿ**



## ತುಂಡು ಬೀಜಾಸುರ ಜೀವಿ



ಚಿತ್ರದಲ್ಲಿ ಕಾಣುವ ವಿಚಿತ್ರ ಹುಳುವಿಗೆ 'ಇರ್ಬಾಯಿದೆಕ್ಕಲೆ' ಎಂದು ತುಳು ಭಾಷೆಯಲ್ಲಿ ಕರಾವಳಿ ಜನರು ಕರೆಯುತ್ತಾರೆ. ಎರಡು ಬಾಯಿಯ ಜಿರಲೆ ಎನ್ನುವುದು ಕನ್ನಡದ ಯಥಾವತ್ ಸಮಾನಾರ್ಥಕವಾಗಿದೆ. ಮೊದಲ ನೋಟಕ್ಕೆ ಎರೆಹುಳುವಿನಂತೆ ಗೋಚರಿಸುವ ಈ ಕಿರು ಜೀವಿ ಇತ್ತೀಚೆಗೆ ಮಂಗಳೂರಿನ ನಮ್ಮ ಹಳ್ಳಿ ಮನೆಯಲ್ಲಿ ಕಂಡಿತು. ಬಾಗಿಲು ದಾಟಿ ಒಳ ಪ್ರವೇಶಿಸುತ್ತಿರುವುದನ್ನು ಗಮನಿಸಿ ತಾಯಿಗೆ ತೋರಿಸಿದೆ. ಅವರು ಇದರ ಬಗ್ಗೆ ಇನ್ನಷ್ಟು ಮಾಹಿತಿ ನೀಡಿದರು.

ಸಾಮಾನ್ಯವಾಗಿ ಮಳೆಗಾಲದಲ್ಲಿ ಕಂಡುಬರುವ ಈ ಹುಳ ಮಾರ್ಚ್ ತಿಂಗಳ ಸುಡುಬಿಸಿಲಲ್ಲಿ ಆಗಮಿಸಿರುವುದನ್ನು ಕಂಡು ಅವರೂ ಆಶ್ಚರ್ಯ ವ್ಯಕ್ತಪಡಿಸಿದರು. ಜೊತೆಗೆ, ಇದನ್ನು ತುಂಡರಿಸಿದಷ್ಟೂ ತುಂಡಾದ ಭಾಗವು ಪ್ರತ್ಯೇಕ ಜೀವಿಯಾಗಿ ಮಾರ್ಪಡುತ್ತದೆ ಎಂಬ ಮಾಹಿತಿಯನ್ನೂ ನೀಡಿದರು. ರಕ್ತ ಬೀಜಾಸುರನ ರಕ್ತದ ಕಣ ಬಿದ್ದಲ್ಲಿ ಇನ್ನೋರ್ವ ಅಸುರ ಹುಟ್ಟಿಕೊಳ್ಳುವಂತೆ ಈ ಹುಳುವನ್ನು ತುಂಡರಿಸಿದಂತೆಲ್ಲಾ ಪ್ರತೀ ತುಂಡೂ ಹೊಸ ಜೀವಿಯಾಗಿ ಚಲಿಸುವ ವಿಸ್ಮಯತೆಯಿಂದಾಗಿ ನಾವೂ ಇದನ್ನು ತುಂಡು ಬೀಜಾಸುರ ಎಂದು ಹೆಸರಿಸಿದೆವು. ಹಾಗೂ ತುಂಡಾಗದ ಹಾಗೆ ಜೋಪಾನವಾಗಿ ಪೊರಕೆಯಲ್ಲೆತ್ತಿ ಹೊರಹಾಕಿದೆವು.

ತಲೆಯ ಭಾಗದ ಇಕ್ಕೆಲಗಳಲ್ಲೂ ಕಿರು ಮೀಸೆಯಂಥಾ ಅಂಗದ ತುದಿಯಲ್ಲಿ ಎರಡು ಬಾಯಿಗಳಿವೆ. ಫೋಟೊ ಕ್ಲಿಕ್ಕಿಸಲು ಸನಿಹ ಹೋದಾಗ ಹಾವು ಹೆಡೆಯೆತ್ತಿದಂತೆ ತನ್ನ ತಲೆಭಾಗವನ್ನು ಮೇಲೆತ್ತಿರುವುದನ್ನೂ ಗಮನಿಸಬಹುದಾಗಿದೆ. ಇದು ಸ್ವರಕ್ಷಣೆಯ ಪ್ರಕ್ರಿಯೆಯಾಗಿರಬಹುದು. ಏಳೆಂಟು ಇಂಚು ಉದ್ದವಿರುವ ಇದರ ಜೀವ ವೈಜ್ಞಾನಿಕ ಮಾಹಿತಿ ತಿಳಿದಿಲ್ಲವಾದರೂ ಹೆಸರಿಗೆ ತಕ್ಕಂತೆ ಜಿರಲೆಯಂತಿರದೆ, ಬಸವನ ಹುಳುವಿನಂತೆ ಮೈಮೇಲೆ ಜಾರುವ ಲೋಳೆಯಿರುವುದನ್ನು ಗಮನಿಸಲು ಸಾಧ್ಯವಾಯಿತು.

**–ರಮಣ್ ಶೆಟ್ಟಿ ರೆಂಜಾಳ, ಮುಂಬೈ**